**IN THE COURT OF III ADDL. CIVIL JUDGE & JMFC**
**AT BELGAUM**
**(PRESENTED OVER BY SMT. LAKSHMI G M)**

**O.S./0000900/2013**

**APPELLANTS :**

1. Shri. Mahadev S/o. Kashappa Kamoji
R/o. H.No. 4855/74-A, 2nd Main Road, Sadashiv Nagar, Belgaum-590019

VERSUS

**RESPONDENTS :**

1. Shri. Rajendra S/o. Basavaraj Bellad
R/o. House No. 9/10 RPD cross, Khanapur Road, Tilakwadi, Belgaum. -6

---------------------------------------------------------------------------
Shri. S.S.Halbhavi, Advocate for the appellant.
---------------------------------------------------------------------------

**ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮಎಫಸಿ ನ್ಯಾಯಾಲಯ ಬೆಳಗಾವಿ**

**ಅಸಲು ದಾವಾ ನಂಃ 900-2013**
**ಪಿ. ಡಬ್ಲೂ-2**

**ದಿಃ 14-03-2016 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ.**

**ನಾನು ವೃತ್ತಿಯಿಂದ ವೈದ್ಯನಾಗಿರುತ್ತೇನೆ. ಮಹಾದೇವ ನನ್ನ ಅಜ್ಜ ಆಗಬೇಕು. ನಾನು ಈಗ ಸಿವಿಲ್ ಆಸ್ಪತ್ರೆಯ ಕ್ವಾಟರ್ಸ್‌ದಲ್ಲಿ ವಾಸವಿದ್ದೇನೆ. 2012 ರಿಂದ ನಾನು ಸಿವಿಲ್ ಆಸ್ಪತ್ರೆಯಲ್ಲಿ ವೈದ್ಯನಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಆಸ್ತಿ ನಂ. 4855 ಇದರ ಸಿಟಿಎಸ್ ನಂ. ನನಗೆ ಗೊತ್ತಿರುವುದಿಲ್ಲ ಅಥವಾ ಪ್ಲಾಟ ಆಗಿರುತ್ತದೆಯೋ ನನಗೆ ಗೊತ್ತಿಲ್ಲ. ನನ್ನ ಅಜ್ಜ ಮತ್ತು ಅಜ್ಜನ ಸಹೋದರನ ಹೆಸರಿನಲ್ಲಿದ್ದ ಆಸ್ತಿ ನಂ. 4855-74 ಎ ಮತ್ತು ಬಿ ಆಗಿರುತ್ತದೆ. 4855-74 ಬಿ ನನ್ನ ಇನ್ನೊಬ್ಬ ಅಜ್ಜನಾದ ಬಾಬುರಾವ ಅವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಮತ್ತು 4855-74 ಎ ನನ್ನ ಅಜ್ಜನ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಗಳ ಖರೀದಿ ಪತ್ರ ಯಾವಾಗ ಆಗಿರುತ್ತದೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಗಳು ಖರೀದಿಸಿದ ಸಮಯದಲ್ಲಿ ಖುಲ್ಲಾ ಜಾಗ ಇತ್ತೊ ಅಥವಾ ಕಟ್ಟಡ ಕಟ್ಟಲಾಗಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಚಿಕ್ಕವನಾಗಿದಾಗಿನಿಂದ ಕಟ್ಟಡ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ 4855-74 ರ ಅಳತೆ ನನಗೆ ಹೇಳಲು**

ಬರುವುದಿಲ್ಲ. ನನ್ನ ಅಜ್ಜ ಕಟ್ಟಡ ಕಟ್ಟುವ ಪರವಾನಿಗೆ ಪಡೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಕಟ್ಟಡ ಪರವಾನಿಗೆ ಪಡೆದುಕೊಂಡು ಕಟ್ಟಡ ಕಟ್ಟಬೇಕಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪರವಾನಿಗೆಯಲ್ಲಿ ಎಷ್ಟು ವಿಸ್ತೀರ್ಣ ಟ್ಟಡ ಕಟ್ಟಲಾಗಿರುತ್ತದೆ-ಸೇಟ ಬ್ಯಾಕ್ ಎಷ್ಟು ಬಿಡಲಾಗಿರುತ್ತದೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಾದ 4855-74 ಎ ರ ಕಟ್ಟಡ ಕಟಸ್ಟಿದ ಅಳತೆ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಭಂಗಿ ಪ್ಯಾಸೇಜ ಇದೆ ಎಂದರೆ ನನಗೆ ಗೊತ್ತಿಲ್ಲ. ಸದಾಶಿವ ನಗರದಲ್ಲಿ ಮನೆಗಳ ದಕ್ಷಿಣ ಭಾಗಕ್ಕೆ ರಸ್ತೆ ಇದ್ದು ಉತ್ತರ ಭಾಗಕ್ಕೆ ಭಂಗಿ ಪ್ಯಾಸೇಜ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರಸ್ತೆಯಿಂದ ನಮ್ಮ ಮನೆಯ ಉತ್ತರ ದಿಕ್ಕಿನಲ್ಲಿರುವ ಕಂಪೌಂಡ ವಾಲ್ ಎಷ್ಟು ಅಂತರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಮನೆ ಮತ್ತು ಕಂಪೌಂಡ ವಾಲ್ ಯಾವ ಇಸ್ವಿಯಲ್ಲಿ ಕಟ್ಟಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಧಾರವಾಡದಲ್ಲಿ ನಮ್ಮ ಸಂಬಂಧಿಕರು ಇರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೇ ಧಾರವಾಡದಲ್ಲಿ ನಮ್ಮ ಸಂಬಂಧಿಕರ ಮನೆಗೆ

ಮಾರ್ಚ 18 ರಂದು ನನ್ನ ಅಜ್ಜ ಹೋಗಿದ್ದರು ಆದರೆ ಯಾರ ಮನೆಗೆ ಹೋಗಿದ್ದರು ನನಗೆ ಗೊತ್ತಿಲ್ಲ. ಮಾರ್ಚ 17 ಮತ್ತು 18 ನೇ ತಾರೀಖು ಧಾರವಾಡಕ್ಕೆ ಹೇದ ಬಗ್ಗೆ ನಾನಾಗಲೀ ಅಥವಾ ನನ್ನ ಅಜ್ಜನಾಗಲೀ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿಯರೇ ಕಂಪೌಂಡ ವಾಲನ್ನು ಕೆಡವಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಕಂಪೌಂಡ ವಾಲ ಕೆಡುವಲಾಗಿದೆ ಎಂದು ನನನ್ನ ಮೌಖಿಕ ಹೇಳಿಕೆ ಹೊರತುಪಡಿಸಿ ಬೇರೆ ದಾಖಲೆ ಇಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಕಂಪೌಂಡ ವಾಲ ಕೆಡವಿದಾಗ ನಾನು ಅಲ್ಲಿ ಹಾಜರಿದ್ದೇ ಎಂದು ನುಡಿಯುತ್ತಾರೆ. ನಾನು ಕಂಪೌಂಡ ವಾಲ ಕೆಡವಬೇಕಾದಾಗ ಅಲ್ಲಿ ಹಾಜರಿದ್ದೇ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಗೆ ದೂರು ನೀಡಿದಾಗ ಸದರಿ ವಿಷಯ ಬರೆಯಲಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಕಂಪೌಂಡ ವಾಲ ಬಿದ್ದ ನಂತರ ಫೋಟೋ ತೆಗೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಕಂಪೌಂಡ ವಾಲ ಬಿಳಿಸುವಾಗ ಹಂತ ಹಂತವಾಗಿ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸದರಿ ಛಾಯ ಚಿತ್ರಗಳಲ್ಲಿ ನಿಪಿ-14 ರಿಂದ 17 ಹಾಜರಿದ್ದ ಬಗ್ಗೆ ಫೋಟೋ ತೆಗೆ ದಿರುವುದಿಲ್ಲ ಎಂದರೆ ಸರಿ. ಸದರಿ ಛಾಯಾ ಚಿತ್ರಗಳು ದಾವಾ ಆಸ್ತಿಯ ಕಂಪೌಂಡ ವಾಲ ಚಿತ್ರಗಳು ದಾವಾ ಆಸ್ತಿಯ ಚಿತ್ರಗಳೇಂದು ತೋರಿಸಲು ಯಾವುದೇ ಪುರಾವೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರೆಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

-ಸಹಿ-

**3ನೇ ಅಧಿಕ ಸಿವಿಲ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**